ಓ ಎಸ್ ನಂ. 140/2022
ಪಿ ಡಬ್ಲು 1
ದಿನಾಂಕ 19-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರಃ ಶ್ರೀ ಎ ಎಸ್ ಎನ್ ಬಿ ವಕೀಲರಿಂದಃ

ನನ್ನ ಅಜ್ಜ ಅಂದರೆ ನನ್ನ ತಂದೆಯ ತಂದೆ ಹೆಸರು ಗಂಗಣ್ಣ. ನನ್ನ ತಂದೆ ಪುರದಪ್ಪರವರಿಗೆ 3 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು. ಅವರೆಂದರೆ 1. ಚಂದ್ರಮ್ಮ 2. ತಿಮ್ಮಪ್ಪ ಆದ ನಾನು 3.ಮಲ್ಲೇಶಪ್ಪ 4. ಶಾರದಮ್ಮ 5. ಮಹೇಶ್ವರಮ್ಮ 6. ನಂಜುಂಡಪ್ಪ. ಪ್ರಸ್ತುತ ದಾವೆಯಲ್ಲಿ ಜಮೀನುಗಳಲ್ಲದೆ ಖಾಲಿ ಜಾಗ ಮತ್ತು ಮನೆಯನ್ನು ಸಹ ಸೇರಿಸಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯಲ್ಲಿ ನಾನು ಜಮೀನು ಮತ್ತು ತೋಟಗಳನ್ನು ಮಾತ್ರ ಸೇರಿಸಿದ್ದು ಖಾಲಿ ಜಾಗ ಮತ್ತು ಮನೆಗಳನ್ನು ಸೇರಿಸಿಲ್ಲ ಎಂದು ಕೇಳಲಾಗಿ ಸಾಕ್ಷಿ ನನ್ನ ವಕೀಲರಿಗೆ ಆ ಬಗ್ಗೆ ಮಾಹಿತಿ ನೀಡಿದ್ದೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯಲ್ಲಿ ಖಾಲಿ ಜಾಗ ಮತ್ತು ಮನೆಗಳನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಜಮೀನು ಹುಲಿಗುಂಡಿ ಗ್ರಾಮದಲ್ಲಿ ಇರುತ್ತದೆ. ಅದರೆ ಸರ್ವೆ ನಂ.18 ಅದರಲ್ಲಿ 7 ಎಕರೆ 37 ಗುಂಟೆ ವಿಸ್ತೀರ್ಣ ಇದೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ.

ಅದರ ವಿಸ್ತೀರ್ಣ ದಾಖಲೆಗಳ ಪ್ರಕಾರ 7 ಎಕರೆ 27 ಗುಂಟೆ ಎಂದರೆ ಸರಿ. ಸರ್ವೆ ನಂ.18 ರ ಆಸ್ತಿ ಮೊದಲು ಪಾರಮ್ಮ ಕೋಂ ನಂಜಪ್ಪರವರ ಹೆಸರಿನಲ್ಲಿತ್ತು ಎಂದರೆ ಸರಿ. ಸದರಿ ಪಾರಮ್ಮ ನನ್ನ ತಾಯಿ ಮರಳಮ್ಮರವರ ತಾಯಿ ಆಗಿರುತ್ತಾರೆ. ನನ್ನ ಅಜ್ಜಿ ಪಾರಮ್ಮ ದಿನಾಂಕ 22/12/1947 ರಂದು ನನ್ನ ತಾಯಿ ಮರುಳಮ್ಮ ನನ್ನ ತಂದೆ ಪುರದಪ್ಪರವರಿಗೆ ಒಂದು ದಾನಪತ್ರವನ್ನು ಮಾಡಿರುತ್ತಾರೆ ಎಂದರೆ ಸರಿ. ಸದರಿ ದಾನಪತ್ರ ಕಡೂರಿನ ಉಪನೊಂದಣಾಧಿಕಾರಿ ಕಚೇರಿಯಲ್ಲಿ ನೊಂದಣಿ ಸಹ ಆಗಿದೆ ಎಂದರೆ ಸಾಕ್ಷಿ ಹಿಂದೆ ಆಗಿರುವ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾನಪತ್ರದಂತೆ ದಾವಾ ಐಟಂ ನಂ.1 ರ ಸ್ವತ್ತು ನನ್ನ ತಂದೆ ತಾಯಿ ಹೆಸರಿಗೆ ಜಂಟಿ ಖಾತೆ ಬಂದಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂ.18 ರ 7 ಎಕರೆ 27 ಗುಂಟೆ ಪೈಕಿ 3 ಎಕರೆ 27 ಗುಂಟೆ ಜಮೀನನ್ನು ನನ್ನ ತಮ್ಮನಾದ 1 ನೇ ಪ್ರತಿವಾದಿ ಮಲ್ಲೇಶಪ್ಪರವರ ಹೆಸರಿಗೆ ನನ್ನ ತಾಯಿ ಮರುಳಮ್ಮರವರು ದಿನಾಂಕ 10/01/2019 ರಂದು ಒಂದು ವಿಲ್ಲನ್ನು ನೊಂದಣಿ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ನನಗೆ ಗೊತ್ತಿಲ್ಲದಂತೆ ಸದರಿ ವಿಲ್ಲನ್ನು ಮಾಡಿಸಲಾಗಿದೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂ.18 ರಲ್ಲಿ ಉಳಿದ 4 ಎಕರೆ ಜಮೀನು ಹಾಗೇ ಉಳಿದಿರುತ್ತದೆ ಎಂದರೆ ಸಾಕ್ಷಿ ಸದರಿ ಸರ್ವೆ ನಂ.18 ರ 7 ಎಕರೆ 27 ಗುಂಟೆ ಜಮೀನು ನನ್ನ ತಾಯಿ

ಮರುಳಮ್ಮರವರ ಹೆಸರಿನಲ್ಲಿ ಖಾತೆ ಇದೆ ಎಂದು ನುಡಿಯುತ್ತಾರೆ. ನನ್ನ ತಾಯಿ 1ನೇ ಪ್ರತಿವಾದಿಗೆ ಬರೆದ ವಿಲ್ ನಾಮೆಯಲ್ಲಿ ಸರ್ವೆ ನಂ.22/5ರ 5 ಎಕರೆ ಪೈಕಿ 1 ಎಕರೆ 28 ಗುಂಟೆ ಜಮೀನನ್ನು ಸಹ ಸೇರಿಸಿರುತ್ತಾರೆ ಎಂದರೆ ಸರಿ. ಇದಲ್ಲದೇ ಸರ್ವೆ ನಂ.50/4ರ 2 ಎಕರೆ 38 ಗುಂಟೆ ಪೈಕಿ 39 ಗುಂಟೆ ಜಮೀನನ್ನು ಸಹ 1ನೇ ಪ್ರತಿವಾದಿ ಮಲ್ಲೇಶಪ್ಪರವರ ಹೆಸರಿಗೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲದಂತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯಲ್ಲಿ ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ನನಗೆ ತಿಳಿದಿದೆಯಾ ಎಂದರೆ ಸಾಕ್ಷಿ ನೆನಪಿರುವಷ್ಟು ಹೇಳುತ್ತೇನೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.